ಆಗಲಾದರೂ ಹೇಳಬೇಕಾಗುತ್ತೆ. ಅದಿರ್ಲಿ, ನಿನ್ನಿಂದ ಸತ್ತನಲ್ಲ, ಆ ಪುಣ್ಯವಂತನ ಅಡ್ರೆಸ್ ಕೊಡು.'

'ಆಗಲಿ ಸರ್ ಕೊಡ್ತೀನಿ, ಅಂಥದ್ದೇನ್ ಪಾಪದ ಕೆಲಸ ಮಾಡಿದ್ದ ಆ ಪುಣ್ಯವಂತ?'

ಶರಣಾಗತ ಏನೂ ಉತ್ತರಿಸದಿದ್ದದ್ದನ್ನು ಮನಗಂಡ ಇನ್ಸ್‌ಪೆಕ್ಟರ್, ಮರುಪ್ರಶ್ನೆ ಮಾಡದೆ ತಮ್ಮ ಕರ್ತವ್ಯದೆಡೆ ಗಮನ ಕೊಟ್ಟರು. ಮುಂದಿನ ಹೆಜ್ಜೆ ಇಡುವ ಮೊದಲು ಒಮ್ಮೆ ಕೊಲೆಯಾದ ವ್ಯಕ್ತಿಯ ಸ್ಥಳಕ್ಕೆ ಭೇಟಿ ನೀಡಬೇಕು ಪ್ರೈಮಾಫೆಸಿ ಏನಿದೆ ಎಂದು ತಿಳಿದುಕೊಳ್ಳಬೇಕು ಎಂದೆನ್ನಿಸಿ ಆತನನ್ನು ಅಲ್ಲೇ ಲಾಕಪ್‌ನಲ್ಲಿರಿಸಿ, ಪೇದೆಯೊಬ್ಬನ ಜೊತೆ ಜೀಪ್ ಹತ್ತಿದ್ದರು.

* * *

ಇನ್ಸ್‌ಪೆಕ್ಟರ್ ಅನ್ನು ನೋಡಿದ ಮನೆಯೊಳಗಿನಿಂದ ಬಂದ ವ್ಯಕ್ತಿಯೊಬ್ಬ ಹೊಟ್ಟೆ ತುಂಬಾ ತಿಂದಿರುವುದು ಆತ ತೇಗುತ್ತಾ ಬರುವುದನ್ನು ನೋಡಿದಾಗ ತಿಳಿಯುವಂತಿತ್ತು.

'ಏನ್ ಇನ್ಸ್‌ಪೆಕ್ಟರ್ ಸಾಹೇಬ್ರು? ಮಟ ಮಟ ಮಧ್ಯಾಹ್ನದಾಗ ನಮ್ಮ ಮನೆಗೆ ಬಂದಿದಿರಲ್ಲ? ಏನ್ ವಿಷ್ಯ?' ಎಂದು ಆ ವ್ಯಕ್ತಿ ಕೇಳಿದಾಗ ತಬ್ಬಿಬ್ಬಾದರೂ ತನ್ನ ಖಡಕ್ ಸ್ವಭಾವ ಬಿಟ್ಟು ಕೊಡದ ಇನ್ಸ್‌ಪೆಕ್ಟರ್, 'ಒಬ್ಬ ವ್ಯಕ್ತಿಯ ಕೊಲೆಯಾಗಿದೆ. ಅದರ ಸಲುವಾಗಿ ಬಂದಿದ್ದೀವಿ' ಎಂದರು.

'ಕೊಲೆನಾ? ಎಲ್ಲಿ ಸರ್?, 'ನಿಮ್ಮ ಹೆಸರೇನು?'

'ಪುಣ್ಯವಂತ. ಪೂರ್ತಿ ಹೆಸರು, ದಿಂಡನೂರು ಪುಣ್ಯವಂತ ಅಂತ ಸರ್. ನಾನು ಕನ್ನಡ ಮೇಷ್ಟ್ರು. ಹಾಗಾಗಿ ಇನಿಷಿಯಲ್‌ನ ಕನ್ನಡದಲ್ಲೇ ಬರಿತೀನಿ'.

'ಅದು ಸರಿ. ಆದ್ರೆ ದಿ ಪಕ್ಕದಲ್ಲಿ ಫುಲ್ ಸ್ಟಾಪ್ ಇಟ್ಟರೆ ದಿವಂಗತ ಅಂತಾನೂ ಆಗುತ್ತಲ್ವ?'

'ಅದು ಫುಲ್ ಸ್ಟಾಪ್ ಇಟ್ಟರೆ ಅಲ್ಲ ಸರ್. ಎರಡು ಉದ್ದ ಗೆರೆಗಳನ್ನು ಇಟ್ಟರೆ ದಿವಂಗತ ಅಂತ ಆಗುತ್ತೆ. ಭಾಳ ಜನ ತಪ್ಪು ತಿಳ್ಕೊಂಡಿದ್ದಾರೆ' ಎಂದು ಕೈಯಲ್ಲೇ ಎರಡು ಉದ್ದ ಗೆರೆಗಳನ್ನು ಬರೆದು ತೋರಿಸಿದ.

'ಆದ್ರೆ ನಿಮ್ಮ ಈ ಕನ್ನಡ ಪ್ರೇಮದಿಂದಾಗಿ ನೀವೇ ದಿವಂಗತ ಆಗಿರೋದು ಅಂತ ನಾವು ನಂಬೋ ಹಂತಕ್ಕೆ ಹೋಗಿದ್ವಿ'.

'ಯಾಕೆ ಸರ್?'

'ನಮಗೆ ಬಂದಿರೋ ಮಾಹಿತಿ ಪ್ರಕಾರ ಈಗಾಗಲೇ ನಿಮ್ಮ ಕೊಲೆಯಾಗಿದೆ.'

'ಏನು ನನ್ನ ಕೊಲೆನಾ?'

'ಹೌದು, ಕೊಲೆಗಾರ ಬಂದು ನಮ್ಮ ಸ್ಟೇಷನ್‌ನಲ್ಲಿ ಸರೆಂಡರ್ ಆಗಿದ್ದಾನೆ.'

'ಏನ್ ಹೇಳ್ತಿದ್ದೀರಾ ಸರ್?'

'ಹೌದು, ನಿಮ್ಮನ್ನು ಕೊಂದೆ ಎಂದು ಹೇಳಿ ಒಬ್ಬರು ಬಂದು ಸರೆಂಡರ್ ಆಗಿದ್ದಾರೆ. ಹಾಗಾಗಿಯೇ ನಾವು ಕನ್ಫರ್ಮ್ ಮಾಡ್ಕೊಳ್ಳೋಕೆ ಬಂದಿದ್ದು. ನಿಮ್ಮ ಮನೆ ಮುಂದಿನ ಬೋರ್ಡ್ ನಮ್ಮನ್ನ ಇನ್ನೂ ಗೊಂದಲಕ್ಕೀಡುಮಾಡಿತು.'

ಪುಣ್ಯವಂತನ ಮೈ ಬೆವರಿತು. ಮನೆಯಲ್ಲಿರುವ ಬೇರೆ ಯಾರಿಗೂ ಈ ವಿಷಯ ತಿಳಿಯದಂತೆ ನೋಡಿಕೊಳ್ಳಲು ಪೊಲೀಸರಿಗೆ ಸನ್ನೆ ಮಾಡಿದ.

'ಯಾರ್ ಸರ್ ಅದು ನನ್ನನ್ನ ಕೊಲೆ ಮಾಡಿರೋದು?' ಎಂಬ ಸಹಜ ಪ್ರಶ್ನೆ ಕೇಳಿದಾಗ ಇನ್ಸ್‌ಪೆಕ್ಟರ್‌ಗೆ ಶರಣಾಗತನ ಹೆಸರು ಏನೆಂಬುದು ನೆನಪಿಗೆ ಬರಲಿಲ್ಲ. ಅದರ ಬಗ್ಗೆ ಅಷ್ಟಾಗಿ ಗಮನ ಕೊಟ್ಟು ಕೇಳಿರಲಿಲ್ಲ.

'ಯಾರಾದ್ರೂ ಆಗ್ಲಿ ಬಿಡಿ. ನಿಮಗೇನು ಆಗಿಲ್ಲ ತಾನೆ? ಬಹುಶಃ ಏನೋ ಕನ್ಫ್ಯೂಸ್ ಆಗಿದೆ. ನಾವೇ ಮಿಸ್ ಆಗಿ ಬಂದಿದಿವಿ ಅನ್ಸುತ್ತೆ. ಮತ್ತೊಮ್ಮೆ ಹೋಗಿ ಕ್ಲಾರಿಟಿ ತಗೊಂಡ್ ಸರಿಯಾದ ಜಾಗಕ್ಕೆ ಹೋಗ್ತೀವಿ.'

'ಅಲ್ಲ ಸರ್, ಆದ್ರೂ ನೀವು ನನ್ನ ಕೊಲೆಯಾಗಿದೆ ಅಂತ ಹುಡ್ಕೊಂಡ್ ಬಂದು ಈಗ ಅದು ಸುಳ್ಳು ಅಂದ್ರೆ ಹೇಗೆ?'

'ಅಯ್ಯೋ ಎಂಥೆಂಥ ಕೇಸ್‌ನಲ್ಲಿ ಮಿಸ್ ಇನ್ಫಾರ್ಮೇಶನ್ ಆಗ್ತಾವೆ ಗೊತ್ತಾ? ಇದೂ ಹಾಗೆ ಆಗಿರ್ಬೇಕು. ಆದ್ರೂ ಸಾರಿ, ಅನವಶ್ಯಕ ಬಂದು ನಿಮಗೆ ತೊಂದರೆ ಕೊಟ್ವಿ.'



'ಇರ್ಲಿ ಬಿಡಿ ಸರ್, ನಾನು ಸತ್ತಿಲ್ಲ, ಬದುಕೇ ಇದ್ದೀನಿ ಅಂತ ನೆನಪಿಸಿದ್ರಲ, ಅದೂ ಒಳ್ಳೇದೇ ಆಯ್ತು' ಎಂದು ಪುಣ್ಯವಂತ ನಕ್ಕ.

'ಯಾವುದಕ್ಕೂ ನಿಮ್ಮ ಹೆಸರಿನ ಬೋರ್ಡ್‌ನಲ್ಲಿರೋ 'ದಿ.'ನ ತೆಗೆಯೋದು ಒಳ್ಳೇದು ಎಂದಾಗ ಮೂವರೂ ನಕ್ಕರು. ಪೊಲೀಸರು ಜೀಪ್ ಹತ್ತಿ ಹೋಗುತ್ತಿದ್ದಂತೆ ಪುಣ್ಯವಂತನ ಅಮ್ಮ ಬಂದು 'ಏನಂತೆ, ಆ ಪೊಲೀಸರದ್ದು?' ಎಂದಾಗ, 'ಅದೇನೋ ಜನರೆಡೆಗೆ ಪೊಲೀಸ್ ಅಂತ ಹೊಸ ಯೋಜನೆ ಶುರುವಾಗಿದೆ ಅಂತಮ್ಮ. ಅದ್ಕೆ ಎಲ್ಲಾ ಸೇಫ್ ಆಗಿದೆ ಅಲ್ವಾ ಅಂತ ವಿಚಾರಿಸಿಕೊಂಡು ಹೋಗಲಿಕ್ಕೆ ಬಂದಿದ್ರು. ನಮ್ ರಸ್ತೆಲಿ ಏನೂ ಪ್ರಾಬ್ಲಮ್ ಇಲ್ಲ ಅಂದೆ. ಹಾಗೇ ಹೊರಟು ಹೋದ್ರು' ಎಂದು ಹೇಳಿ ಪುಣ್ಯವಂತ ಸಮಾಧಾನ ಮಾಡಿದನಾದರೂ, ಅವನೊಳಗೆ ಎದ್ದ ಬಿರುಗಾಳಿ ಅವನನ್ನು ತತ್ತರಿಸುತ್ತಲೇ ಇತ್ತು. ಅಮ್ಮ ಒಳಗೆ ಹೋದರು ಆತ ಈ ವಿಚಾರವನ್ನು ಪಕ್ಕದ ಮನೆಯಲ್ಲಿರುವ ತನ್ನ ಆತ್ಮೀಯ ಗೆಳೆಯನ ಬಳಿ ಚರ್ಚಿಸಿ ಅವನ ಪ್ರತಿಕ್ರಿಯೆ ತಿಳಿದು ನಗುವುದೋ, ದುಃಖಿಸುವುದು ಮಾಡಿದರಾಯ್ತು ಎಂದುಕೊಂಡು ಅತ್ತ ನಡೆದ.

***

'ಜಂಟಲ್‌ಮನ್ ಥರ ಕಾಣ್ತೀರ. ಆದ್ರೆ ಸುಳ್ಳು ಮಾಹಿತಿ ಕೊಟ್ಟು ಪೊಲೀಸರನ್ನ ತಪ್ಪುದಾರಿಗೆ ಎಳೆದರೆ ನಿಮಗಿರೋ ಶಿಕ್ಷೆ ಬಗ್ಗೆ ಗೊತ್ತೇನ್ರಿ ನಿಮಗೆ?' ಅನವಶ್ಯಕವಾಗಿ ಯಾರದೋ ಮನೆ ತನಕ ಹೋಗಿ ಬಂದ ಕೋಪದಲ್ಲಿದ್ದರು ಇನ್ಸ್‌ಪೆಕ್ಟರ್.

'ನಿಜವಾಗ್ಲೂ ಹೇಳ್ತೀನಿ ಸರ್. ನಾನು ಕೊಲೆ ಮಾಡಿರೋದು ಆ ಪುಣ್ಯವಂತನನ್ನೇ.'

ಅಷ್ಟರಲ್ಲಿ ಪೇದೆ ತನ್ನ ಮೊಬೈಲ್‌ನಲ್ಲಿ ಇನ್ಸ್‌ಪೆಕ್ಟರ್ ಮತ್ತು ಪುಣ್ಯವಂತ ಮಾತನಾಡುತ್ತಿದ್ದಾಗ ತೆಗೆದ ಫೋಟೊವನ್ನು ತನ್ನ ಮೊಬೈಲ್‌ನಲ್ಲಿ ದಿನಾಂಕ ಸಮೇತ ತೋರಿಸಿದಾಗ, ಶರಣಾಗತ ತನ್ನ ವರಸೆ ಬದಲಿಸಬೇಕಾಯಿತು.

'ಅವ್ನು ಬದುಕಿರ್ಬೋದು ಸರ್. ಆದ್ರೆ ನಾನು ಅವನ್ನ ನಿನ್ನೆ ಕೊಂದೆ.'

'ಹೌದಾ? ಅದ್ಯಾವ ಲೋಕದಲ್ಲಿ ಕೊಂದ್ರಿ? ಅವನು ನೋಡಿದ್ರೆ ಜೋಳದ ರೊಟ್ಟಿ ಪುಂಡಿ ಸೊಪ್ಪು ತಿಂದುಕೊಂಡಿದಾನೆ', ಮನೋಲೋಕದಲ್ಲಿ ಸರ್ ಎಂಬ ಶರಣಾಗತನ ಗಂಭೀರವಾದ ಮಾತನ್ನು ಅಲ್ಲಿ ಯಾರೂ ಕೇಳಿಸಿಕೊಳ್ಳಲಿಲ್ಲ.

'ಹೇಳ್ರಿ, ಬದುಕಿರೋ ವ್ಯಕ್ತಿನ ನೀವು ಕೊಂದದ್ದು ಎಲ್ಲಿ?'

'ಹೇಳಿದ್ನಲ್ಲ ಸರ್. ನನ್ನ ಮನೋಲೋಕದಲ್ಲಿ. ನನ್ನ ಯೋಚನೆಯಲ್ಲಿ ಅವನನ್ನು ನಾನು ಕೊಂದಿದಿನಿ. ಅದಕ್ಕಾಗಿಯೇ ಪಶ್ಚಾತ್ತಾಪಕ್ಕಾಗಿ ಸರೆಂಡರ್ ಆಗೋಕ್ ಬಂದಿದಿನಿ', ಈ ಮಾತು ಕೇಳಿದ ಇನ್ಸ್‌ಪೆಕ್ಟರ್‌ಗೆ ಇದು ಸಾಧಾರಣ ಕ್ರೈಮ್ ಪ್ಯಾಟರ್ನ್ ಅಲ್ಲ ಎನ್ನಿಸಿ, ಕುತೂಹಲ ಹೆಚ್ಚಾಗಿ, 'ಹೇಳಿ ಹಾಗಾದ್ರೆ ನಿಮ್ಮ ಮನೋಲೋಕದಲ್ಲಿ ಆ ದಿ. ಪುಣ್ಯವಂತ ದಿವಂಗತ ಪುಣ್ಯವಂತ ಆಗೋಕೆ ಕಾರಣ ಏನು?' ಎಂದು ಆಸಕ್ತಿಯಿಂದ ಕೇಳಿಸಿಕೊಳ್ಳಲು ಕೂತರು. ಶರಣಾಗತ ತನ್ನ ಸುದೀರ್ಘ ದೋಷಾರೋಪ ಪಟ್ಟಿಯನ್ನು ಇನ್ಸ್‌ಪೆಕ್ಟರ್ ಮುಂದಿಡುತ್ತಾ ಹೋದ.

'ನಾನು ಮತ್ತು ಪುಣ್ಯವಂತ ಬಾಲ್ಯದಿಂದಲೇ ಗೆಳೆಯರು ಸರ್. ಇಬ್ಬರೂ ಓದಿದ ಶಾಲೆ ಮತ್ತು ಕಾಲೇಜುಗಳೆರಡೂ ಒಂದೇ. ನಮ್ಮಲ್ಲಿನ ಆತ್ಮೀಯತೆ ಕಂಡು ನಮ್ಮನ್ನು ಗೆಳೆಯರಿಗಿಂತ ಸಹೋದರರು ಎನ್ನುತ್ತಿದ್ದರು. ಅವನು ಹೈಸ್ಕೂಲ್ ಕನ್ನಡ ಮೇಷ್ಟ್ರಾಗಿ ಬಹಳ ಶಿಸ್ತುಬದ್ಧ ಜೀವನ ನಡೆಸಿದ. ನಾನು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಎಫ್.ಡಿ.ಎ. ಆಗಿದ್ದೀನಿ. ಇಬ್ಬರ ಕುಟುಂಬಗಳ ನಡುವೆ ಕೂಡ ಒಳ್ಳೆಯ ಬಾಂಧವ್ಯ ಇದೆ. ನಮ್ಮನೇಲಿ ಜೋಳದ ರೊಟ್ಟಿ ಪಲ್ಯ ಮತ್ತೆ ಬಿರಿಯಾನಿ ಮಾಡಿದಾಗ ಅವನ್ನ ಕರೀದೆ ಇರೊಲ್ಲ. ಅವರ ಮನೇಲಿ ಬಸ್ಸಾರು ಮುದ್ದೆ ಮತ್ತೆ ಮಟನ್ ಮಾಡಿದಾಗ ನನ್ನ ಕರೀದೆ ಇರೊಲ್ಲ. ನಾವೆಲ್ಲ ವರ್ಷಕ್ಕೊಮ್ಮೆ ಫ್ಯಾಮಿಲಿ ಸಮೇತ ಪ್ರವಾಸ ಹೋಗಿ ಬರ್ತೀವಿ. ನಮ್ಮ ಮಕ್ಕಳು